ನರಸಿಂಹರಾಜಪುರ ತಾಲ್ಲೂಕಿನ ಕಸಬಾ ಹೋಬಳಿಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವುದು

೨೩೨೧. ಶ್ರೀ ಎಂ. ಜಿ. ಗೋವಿಂದಗೌಡ (ಶೃಂಗೇರಿ).—ಮಾನ್ಯ ಕಂದಾಯ ಯೋಜನೆ ಭಾರಿ ಮತ್ತು ಮಾಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ನರಸಿಂಹರಾಜಪುರ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಕಳೆದ ವರ್ಷ ಶೇ. ೨೫ ಕ್ಕಿಂತಲೂ ಕಡಿಮೆ ಮಳೆಯಾಗಿದ್ದು ಈ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಈ ಪ್ರದೇಶದ ಜನ ಪ್ರತಿನಿದಿಗಳೊಡನೆ ಚೀಟಿ ನೀಡಿ ಪರಿಸ್ಥಿತಿಯನ್ನು ಮನಗಂಡು ಸಹ ಅಧಿಕಾರಿಗಳು ನಿರ್ಲಕ್ಷದಿಂದ ಘೋಷಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಈ ಪ್ರದೇಶದ ರೈತರಿಂದ ಸಾಲ ಮತ್ತು ಕಂದಾಯ ಹಾಗೂ ಇತರೇ ಸರ್ಕಾರಿ ತೆರಿಗೆಗಳನ್ನು ನಿರ್ದಾಕ್ಷಣ್ಯವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ, ಭಾರಿ ಮತ್ತು ಮಾಧ್ಯಮ ನೀರಾವರಿ ಮಂತ್ರಿಗಳು).—

(ಅ) ಪರಿಸ್ಥಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ ಎಂಬ ಭಾವನೆ ಸರಿಯಲ್ಲ. ಕಳೆದ ವರ್ಷ ನರಸಿಂಹರಾಜಪುರ ಹೋಬಳಿಯಲ್ಲಿ ಸರಾಸರಿ ೧೮೩೮.೦೭ ಎಂ.ಎಂ. ಬದಲಾಗಿ ೧೮೦೬ ೦೧ ಎಂ.ಎಂ. ಮಳೆಯಾಗಿದ್ದು ಇದು ಶೇ. ೨೫ಕ್ಕಿಂತ ಜಾಸ್ತಿ ಇರುತ್ತದೆ. ಆಣೆವಾರಿ ಪ್ರಕಾರ ಮೂರು ಗ್ರಾಮಗಳಲ್ಲಿ ಶೇ. ೨೫ಕ್ಕಿಂತ ಕಡಿಮೆ ಬೆಳೆ ಇದ್ದು ಕಂದಾಯವನ್ನು ಮನ್ನಾ ಮಾಡುವ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದೇ ರೀತಿ ೨೬ ಗ್ರಾಮಗಳಲ್ಲಿ ಆಣೆವಾರಿ ೨೫ ರಿಂದ ೩೭ ಮತ್ತು ೩೮ ರಿಂದ ೫೦ ಇದ್ದು, ಇಂತಹ ಗ್ರಾಮಗಳಲ್ಲಿ ಕ್ರಮವಾಗಿ ಪೂರ್ತಿ ಕಂದಾಯ ಮುಂದೂಡುವಿಕೆ ಮತ್ತು ಅರ್ಧ ಅವಮಾನತ್ತು ಇರುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸರ್ಕಾರವು ಅಭಾವ ಪೀಡಿತ ಪ್ರದೇಶವೆಂದು ಘೋಷಿಸುವುದಿಲ್ಲ.

(ಆ) ಇಲ್ಲ.

(ಇ) ಪ್ರಶ್ನೆ (ಅ)ಗೆ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುದಿಲ್ಲ.

ಶ್ರೀ ಐ. ಬಿ. ಶಂಕರ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನರಸಿಂಹರಾಜಪುರ ಹೋಬಳಿಯಲ್ಲಿ ಕಳೆದ ವರ್ಷ ಸರಾಸರಿ ೧೮೩೮,೦೭ ಎಂ.ಎಂ. ಬದಲಾಗಿ ೧೮೦೬.೦೧ ಎಂ.ಎಂ. ಮಳೆಯಾಗಿದ್ದು ಇದು ಶೇಕಡಾ ೨೫ಕ್ಕಿಂತ ಜಾಸ್ತಿ ಇರುತ್ತದೆ ಎಂದು ಹೇಳಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಮಳೆ ಬಂದ ಲೆಕ್ಕವನ್ನು ಹಾಕುವುದಿಲ್ಲ. ಅಲ್ಲಿ ಬಿತ್ತನೆ ಸಮಯದಲ್ಲಿ ಸರಿಯಾಗಿ ಮಳೆ ಬಂದರೆ ಮಾತ್ರ ಅದನ್ನು ಲೆಕ್ಕಕ್ಕೆ ಹಿಡಿಯಬೇಕು. ಆ ಸಮಯದಲ್ಲಿ ಮಳೆ ಬಂದರೆ ಮಾತ್ರ ಅಲ್ಲಿಯ ರೈತರಿಗೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ಯಾವುದೋ ಸಮಯದಲ್ಲಿ ಬಂದ ಮಳೆಯನ್ನು ಲೆಕ್ಕ ಹಾಕಿದರೆ ಅದು ತಪ್ಪಾಗುತ್ತದೆ. ಅದೇ ರೀತಿಯಲ್ಲಿ ಆ ಪ್ರದೇಶವನ್ನು ಅಭಾವ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿಲ್ಲ ಎಂದು ಹೇಳಿದ್ದಾರೆ ಅಲ್ಲಿ ಒಂದಂ ಕಾಳು ಭತ್ತವನ್ನು ಕೂಡ ಬೆಳೆಯುವಂಥ ಪರಿಸ್ಥಿತಿಯು ಇರಲಿಲ್ಲ. ಅದು ಮಾನ್ಯ ಸಚಿವರಿಗೆ ಗೊತ್ತಿದೆ. ಅದು ಅವರ ಗಮನಕ್ಕೆ ಬಂದಿದ್ದರೂ ಕೂಡ ಆ ಪ್ರದೇಶವನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಆದುದರಿಂದ ಆ ಪ್ರದೇಶಕ್ಕೆ ಕಂದಾಯವನ್ನು ಮನ್ನಾ ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ಎಷ್ಟು ದಿವಸಗಳಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕಾಗಿ ಪ್ರಾರ್ಥನೆ.

ಶ್ರೀ ಎಸ್. ಆರ್. ಬೋಮ್ಮಾಯಿ.—ಮಾನ್ಯ ಸದಸ್ಯರು ಹೇಳಿದಂತೆ ಆ ಪ್ರದೇಶಕ್ಕೆ ಕಂದಾಯ ಮನ್ನಾ ಮಾಡುವ ಬಗ್ಗೆ ರಿಪೋರ್ಟ್ ಬರುತ್ತಾ ಇದೆ. ಬಂದಕೂಡಲೇ ಅದರ ಬಗ್ಗೆ ನೋಟಿಫಿಕೇಶನ್

ಮಾಡುತ್ತೇವೆ. ಅನೇಕ ಸಲ ಸಾಕಷ್ಟು ಮಳೆ ಬಂದರೂ ಕೂಡ, ಅದು ಸರಿಯಾದ ಸಮಯದಲ್ಲಿ ಬಾರದಿದ್ದರೆ ರೈತರ ಕೈಗೆ ಫಸಲು ಬರುವುದಿಲ್ಲ. ನಿಯಮಕ್ಕೆ ಸರಿಯಾಗಿ ಶೇಕಡಾ ೭೫ಕ್ಕಿಂತ ಕಡಿಮೆ ಬೆಳೆ ಇದ್ದು ಕಂದಾಯವನ್ನು ಮನ್ನಾ ಮಾಡುವ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ೨೬ ಗ್ರಾಮಗಳಲ್ಲಿ ಅಣೆವಾರಿ ೨೫ ರಿಂದ ೩೭ ಮತ್ತು ೩೮ ರಿಂದ ೫೦ ಇದ್ದು, ಇಂತಹ ಗ್ರಾಮಗಳಲ್ಲಿ ಕ್ರಮವಾಗಿ ಪೂರ್ತಿ ಕಂದಾಯ ಮುಂದೂಡುವಿಕೆ ಮತ್ತು ಅರ್ಧ ಅಮಾನತ್ತು ಇಡುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಐ. ಬಿ. ಶಂಕರ್.—ಈ ಬಗ್ಗೆ ತೀರ್ಮಾನ ಮಾಡುವಾಗ ಮಳೆ ಇಧಾರದ ಮೇಲೆ ಮಾಡುತ್ತೀರಾ ಅಥವಾ ರಿಪೋರ್ಟ್ ಆಧಾರದ ಮೇಲೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡೂ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

ಸುಳ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಒದಗಿಸಲಾದ ಸಾಲಗಳು

೨೪೩. ಶ್ರೀ ಕೆ. ಕುಶಾಲ (ಸುಳ್ಯ),— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನ ಸಹಕಾರಿ ಪ್ರಾಥಮಿಕ ಗ್ರಾಮೀಣ ಭೂ ಅಭಿವೃದ್ಧಿ ಬ್ಯಾಂಕಿನವರು ೧೯೬೧ರಿಂದ ೧೯೬೩ರವರೆಗೆ ಸಾಲ ನೀಡಿದ ಹಿಂದುಳಿದ ವರ್ಗದವರ ಸಂಖ್ಯೆ ಎಷ್ಟು ? ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟೆಷ್ಟು ? (ಪ್ರತ್ಯೇಕ ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಸದರಿ ಬ್ಯಾಂಕಿನವರು ಸಾಲ ನೀಡಿದ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟೆಷ್ಟು ? (ವರ್ಷವಾರು ವಿವರ ನೀಡುವುದು)

ಇ) ಈ ಬ್ಯಾಂಕಿನಲ್ಲಿ ಸಾಲಕ್ಕಾಗಿ ಸಲ್ಲಿಸಿದ ಅರ್ಜಿಗಳೆಷ್ಟು ? ಪಾಲು ಬಂಡವಾಳ ವಸೂಲಾದ ಮತ್ತು ಪಾಲು ಬಂಡವಾಳ ವಸೂಲಾಗಿಯೂ ಸಾಲ ನೀಡದ ಪ್ರಕರಣಗಳೆಷ್ಟು ? ಸಾಲ ನೀಡದಿರಲು ಕಾರಣವೇನು ?

ಶ್ರೀ ಹೆಚ್. ವಿಕಾಂತಯ್ಯ (ಸಹಕಾರ ಸಚಿವರು).—

ಅ) ೧೯೬೦–೬೧ರಿಂದ ೧೯೬೨–೬೩ರವರೆಗೆ ಸುಳ್ಯ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ೭೭೦ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ೪೬ ಪರಿಶಿಷ್ಟ ಜಾತಿ ಮತ್ತು ೪೮ ಪರಿಶಿಷ್ಟ ಪಂಗಡದ ಸದಸ್ಯರಿಗೆ ಸಾಲ ನೀಡಲಾಗಿದೆ. ಕೃಷಿ ಕಾರ್ಮಿಕರಿಗೆ ಯಾವ ಸಾಲವನ್ನೂ ಬ್ಯಾಂಕು ನೀಡಿರುವುದಿಲ್ಲ.

ಆ) ಕಳೆದ ಮೂರು ವರ್ಷಗಳಲ್ಲಿ ಸದರಿ ಬ್ಯಾಂಕಿನವರು ಸಾಲ ನೀಡಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆ ಈ ಕೆಳಗಿನಂತಿದೆ.—

ವರ್ಷ	ಸಣ್ಣ ರೈತ ಅತಿ ಸಣ್ಣ ರೈತ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
೧೯೬೪-೬೫	೧೨೩	೧೬	೧೨
೧೯೬೫-೬೬	೧೨೮	೧೧	೬
೧೯೬೬–೬೭	೧೨೦	೩೨	೧೦
ಒಟ್ಟು	೪೩೦	೫೯	೨೮